ತಿದ್ದುಪಡಿಗಳಿಲ್ಲದೆ ಅಂಗೀಕಾರ ಪಡೆದ **ಈ ಕೆಳಗೆ** ನಮೂದಿಸಿರುವ ವಿಧೇಯಕಗಳನ್ನು ಈ ಮೂಲಕ ಕಳುಹಿಸುತ್ತಿದ್ದೇನೆ.

೧) ೧೯೮೭ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆಗಳ (ತಿದ್ದುಪಡಿ) ವಿಧೇಯಕ

೨) ೧೯೮೭ನೇ ಇಸವಿಯ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕ

೩) ೧೯೮೭ನೇ ಇಸವಿಯ ನೋಂದಣಿ (ಕರ್ನಾಟಕ ತಿದ್ದುಪಡಿ)

೪) ೧೯೮೭ನೇ ಇಸವಿಯ ಕರ್ನಾಟಕ ಕಳ್ಳಬಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕಾರರು, ಗೂಂಡಾಗಳು, ಅನೈತಿಕ ವ್ಯವಹಾರದ ಅಪರಾಧಿಗಳು, ಕೊಳಗೇರಿಗಳನ್ನು ಪತ್ತೆಹಚ್ಚಿ ಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕ.

ವರದಿಯನ್ನೊಪ್ಪಿಸುವುದು

ಅಧ್ಯಕ್ಷರು.—ಮಾನ್ಯ ಶ್ರೀ ಲಕ್ಷ್ಮೀನರಸಿಂಹಯ್ಯನವರು (ಉಪಾಧ್ಯಕ್ಷರು), ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೆಯ ವರದಿಯನ್ನೊಪ್ಪಿಸುವುದು.

ಶ್ರೀ ಲಕ್ಷ್ಮೀನರಸಿಂಹಯ್ಯ (ಉಪಾಧ್ಯಕ್ಷರು).—ಸನ್ಮಾನ್ಯ ಅಧ್ಯಕ್ಷರೇ, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ಬಿ. ನಾರಾಯಣ ಸ್ವಾಮಿ.—ಸಭೆಯ ವರದಿಯನ್ನು ಒಪ್ಪಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸಭೆಗೆ ಒಪ್ಪಿಸಲಾಯಿತು.

ಮನವಿಗಳು

ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನ ೧೦೫೦ ಕೋಟಿ ರೂಪಾಯಿಗಳ ಯೋಜನೆಗೆ ಮಂಜೂರಾತಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ನಿನ್ನೆಯ ದಿವಸ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಮಾನ್ಯ ದೇವೇಗೌಡರು ಮತ್ತು ಮಾನ್ಯ ಮುಖ್ಯಮಂತ್ರಿಯವರು ಡೆಲ್ಲಿಯಲ್ಲಿ...

ಅಧ್ಯಕ್ಷರು.—ತಾವುಗಳು ನೋಟೀಸ್ ಕೊಟ್ಟಿಲ್ಲ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಿಷಯವನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ನಾನು ಮಧ್ಯೆ ಪ್ರವೇಶ ಮಾಡುತ್ತಿಲ್ಲ. ಇದು ಸಂಪ್ರದಾಯ. ಅದು ಏನೆಂದರೆ, ಯಾವುದೇ ಪಾಲಿಸಿ ವಿಷಯ ಇದ್ದರೆ, ಸದನ ನಡೆಯುತ್ತಿರುವಾಗ ಸದನದಲ್ಲಿ ಹೇಳತಕ್ಕಂಥಾದ್ದು ಇದೆ. ಆದರೆ ಮಾನ್ಯ ದೇವೇಗೌಡರು ಒಂದು ಸ್ಟೇಟ್‌ಮೆಂಟ್‌ನ್ನು ಡೆಲ್ಲಿಯಲ್ಲಿಯೇ ಕೊಟ್ಟಿದ್ದಾರೆ. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಬಗ್ಗೆ ನೀರಾವರಿ ಸಚಿವರೊಂದಿಗೆ ಚರ್ಚೆ ಮಾಡಿದ್ದು, ೧೦೫೦ ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ನ್ನು ತಯಾರು ಮಾಡಿದ್ದು, ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ ಎನ್ನುವ ತರಹ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಇಲ್ಲಿ ನನ್ನ ವಿಚಾರ ಏನೆಂದರೆ ಯಾವುದೇ ಸ್ಟೇಟ್‌ಮೆಂಟ್ ಆಗಲಿ ಸದನ ನಡೆಯುತ್ತಿರುವಾಗ ಸದನದಲ್ಲಿಯೇ ಮಾತ್ರ ಅದನ್ನು ಹೇಳತಕ್ಕಂತಹ ಒಂದು ಪದ್ಧತಿ ಇದೆ. ಆದರೆ ಮಾನ್ಯರು ಇವೊತ್ತು ನೇರವಾಗಿ ಡೆಲ್ಲಿಯಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಈ ವಿಷಯ ನೇರವಾಗಿ ನಮ್ಮ ಬಿಜಾಪುರ, ಗುಲ್ಬರ್ಗ, ರಾಯಚೂರು ಜಿಲ್ಲೆಗಳಿಗೆ ಸಂಬಂಧಪಟ್ಟಿದ್ದುದು. ಅಲ್ಲಿಯ ಜನ ನೇರವಾಗಿ ನಮ್ಮನ್ನು ಕೇಳುತ್ತಾರೆ. ಇಂತಹ ಒಂದು ೧೦೫೦ ಕೋಟಿ ರೂಪಾಯಿಗಳ ದೊಡ್ಡ ಪ್ರಾಜೆಕ್ಟ್ ಅಪ್ರೂವ್ ಆದದ್ದು ಸದನದ ಗಮನಕ್ಕೆ ಬಂದಿಲ್ಲ. ಇದು ಹೇಗೆ ಸದನದ ಗಮನಕ್ಕೆ ಬಂದಿಲ್ಲ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಇದರಲ್ಲಿ ಯಾವ ರೀತಿಯ ನೀತಿಯ ವಿಚಾರ ಇಲ್ಲ. ಈ ಒಂದು ಪ್ರಾಜೆಕ್ಟ್ ಬಗ್ಗೆ ಚರ್ಚೆ. ಕಳೆದ ಒಂದು ವರ್ಷದಿಂದ ನಡೆಯುತ್ತಾ ಇದೆ. ವಿಶ್ವಬ್ಯಾಂಕ್‌ನವರು ಆರು ತಿಂಗಳ ಹಿಂದೆ ಬಂದು ಹೋಗಿದ್ದಾರೆ. ಇದು ಎಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ಹಂತಹಂತವಾಗಿ ಚರ್ಚೆ ನಡೆಯುತ್ತಾ ಇದೆ. ಕೇಂದ್ರ ಸರ್ಕಾರದ ಜೊತೆ ಚರ್ಚೆ

ಮಾಡಿ. ಹೇಳಿಕೆ ಕೊಟ್ಟಿಲ್ಲ. ನಾನೂ ಪತ್ರಿಕೆಯಲ್ಲಿ ಓದಿದ್ದೇನೆ. ಇದಕ್ಕೆ ಕ್ಲಿಯರೆನ್ಸ್ ಸಿಕ್ಕಿದೆ ಎಂದು ಹೇಳಿದ್ದಾರೆ ಇದು ಆಡಳಿತಾತ್ಮಕ ವಿಷಯ. ಕ್ಲಿಯರೆನ್ಸ್ ಸಿಕ್ಕಿದೆ ಎಂದರೆ ಪಾಲಿಸಿ ಪ್ಯಾಟರ್ ಆಗುವುದಿಲ್ಲ. ಮಾನ್ಯ ನೀರಾವರಿ ಮಂತ್ರಿಗಳು ಬಂದಮೇಲೆ ಸದನಕ್ಕೆ ವಿವರಗಳನ್ನು ಈ ಕುರಿತು ಕೊಡುತ್ತಾರೆ.

ಅಧ್ಯಕ್ಷರು. ಈಗ ನಮ್ಮ ಮುಂದಿರುವ ವಿಷಯ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಅವರು ಹೇಳಲಿಲ್ಲ ಎಂದು ಹೇಳಿದ್ದಾರೆ ಅದಕ್ಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆ.....

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಈಗ ನಮ್ಮ ಮುಂದಿರುವ ವಿಷಯ

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾಪ

ಅಧ್ಯಕ್ಷರು.—ಈಗ ''ಜನವರಿ ೨೯, ೧೯೮೭ ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ'' ಎಂದು ಶ್ರೀ ಎಂ. ಪಿ. ಪ್ರಕಾಶ್ ಅವರು ಸೂಚಿಸುವುದು. ಶ್ರೀ ವೈ. ಕೆ. ರಾಮಯ್ಯನವರು ಅನುಮೋದಿಸುವುದು.

† ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ''ಜನವರಿ ೨೯, ೧೯೮೭ ರಂದು ವಿಧಾನ ಮಂಡಳದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ.''

ಶ್ರೀ ವೈ. ಕೆ. ರಾಮಯ್ಯ.—''ಮಾನ್ಯ ಎಂ. ಪಿ. ಪ್ರಕಾಶ್‌ರವರು ಮಾಡಿದ ಪ್ರಸ್ತಾಪನೆಯನ್ನು ನಾನು ಅನುಮೋದಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪನೆಯನ್ನು ಮಂಡಿಸಲಾಯಿತು.

ಶ್ರೀ ಎಂ. ಪಿ. ಪ್ರಕಾಶ್ (ಹಡಗಲಿ).—ಸನ್ಮಾನ್ಯ ಅಧ್ಯಕ್ಷರೇ, ಜನವರಿ ೨೯, ೧೯೮೭ ರಂದು ವಿಧಾನಮಂಡಲದ ಜಂಟಿ ಅಧಿವೇಶನಗಳನ್ನುದ್ದೇಶಿಸಿ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣ ಅತ್ಯಂತ ಸಂಕೀರ್ಣಪೂರ್ಣವಾದುದು ಮತ್ತು ಸಂಕ್ಷಿಪ್ತವಾದುದು ಎಂದು ಮೇಲ್ನೋಟಕ್ಕೆ ಕಂಡರೂ ಕೂಡ ಕಳೆದ ನಾಲ್ಕು ವರ್ಷಗಳಲ್ಲಿ ನಮ್ಮ ಸರಕಾರ ಸಾಧನೆ ಮಾಡಿದಂತಹ ಎಲ್ಲಾ ವಿಷಯಗಳ ಬಗ್ಗೆ ವಿವರವಾದ ಪ್ರಸ್ತಾಪವನ್ನು ಮಾಡಿದ್ದಾರೆ. ಒಂದು ಅರ್ಥದಲ್ಲಿ, ಈ ಅಧಿವೇಶನದಲ್ಲಿ ಮಾನ್ಯ ರಾಜ್ಯಪಾಲರ ಭಾಷಣ ಅತ್ಯಂತ ಮುಖ್ಯವಾದುದು. ಜಿಲ್ಲಾಪರಿಷತ್ ಮತ್ತು ಮಂಡಲ್‌ಪಂಚಾಯತ್ ಚುನಾವಣೆಗಳನಂತರ. ನಡೆದಿರುವಂತಹ ಈ ಸಭೆಯಲ್ಲಿ ಈ ಸರಕಾರ ತಾನು ಜನತೆಗೆ ಕೊಟ್ಟಿರತಕ್ಕಂಥ ಅಭಿವಚನಗಳನ್ನು ನೆರವೇರಿಸಿ, ಈ ಚುನಾವಣೆಗಳ ಮೂಲಕ ಮಾಡಿದಂತಹ ಒಂದು ದೊಡ್ಡ ಕ್ರಾಂತಿಕಾರಕ ಬದಲಾವಣೆಯಾಗಿದೆ. ಅದನ್ನು ಅನುಷ್ಠಾನಕ್ಕೆ ತಂದ ಬಗ್ಗೆ ಪ್ರಸ್ತಾಪ ಮಾಡಲಾಗಿದೆ.

ಅಧ್ಯಕ್ಷರೇ, ಈ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಯಿಂದ ಅಧಿಕಾರ ಗ್ರಾಮಮಟ್ಟದಲ್ಲಿ ವಿಕೇಂದ್ರೀಕರಣ ಆಗುತ್ತದೆ ಎಂಬ ಒಂದೇ ಒಂದು ದೃಷ್ಟಿಕೋನದಿಂದ. ಇದನ್ನು ಯೋಚಿಸಬೇಕಾದಂತಹ ಅಗತ್ಯ ಇಲ್ಲ ಇದು ಸಮಗ್ರವಾದಂತಹ ಕ್ರಾಂತಿಕಾರಕ ಬದಲಾವಣೆಯನ್ನು ದೇಶದ ನಡವಳಿಕೆಯಲ್ಲಿ ತರತಕ್ಕಂಥ ಒಂದು ವ್ಯವಸ್ಥೆಯಾಗಿದೆ. ಸಾಂಸ್ಥಿಕ ಸಂಸ್ಥೆಗಳ ವ್ಯವಸ್ಥೆಯ ಒಂದು ಚೌಕಟ್ಟಿನಲ್ಲಿ ಇಡೀ ನಮ್ಮ ರಾಜ್ಯಭಾರದ ವ್ಯವಸ್ಥೆಯನ್ನು ನಾವು ನೋಡಬಹುದು. ಪ್ರಾರಂಭದಲ್ಲಿ ಸ್ವಲ್ಪ ಮಟ್ಟಿಗೆ ಅಡಚಣೆಯಿಂದ ಇದು ಕಟುವಾಗಿ ಇರಬಹುದು, ಅಥವಾ ನಮ್ಮ ದೇಶದಲ್ಲಿರತಕ್ಕಂಥ ನಿರಕ್ಷರತೆ, ಬಡತನ, ಇವುಗಳ ಮುಖಾಂತರ ಆಗಿರತಕ್ಕಂಥ ಜಾತೀಯ ಕಲಹಗಳಿಂದ ಆಗಬಹುದು, ಆದರೆ ಇವುಗಳು ಎಲ್ಲಾ ಕೂಡ ತಾತ್ಕಾಲಿಕ ಈ ಮಟ್ಟದಲ್ಲಿ ಸಾಂಸ್ಥಿಕ ಸಂಸ್ಥೆಗಳಿಗೆ ಘನತೆಯನ್ನು, ಗಾಂಭೀರ್ಯತೆಯನ್ನು ತಾರದೇ ಹೋದರೆ, ಭ್ರಷ್ಟಾಚಾರಕ್ಕೆ ಪೆಡಂಭೂತಾಕಾರ

† ಕೆ: ಟಿಪ್ಪಣಿ ಸಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಶೀಲಿಸಿಲ್ಲ ಎಂದು ಸೂಚಿಸುತ್ತದೆ.